ಇ) ತೆಂಗಿನ ಮರಗಳು ರೋಗಕ್ಕೆ ತುತ್ತಾದ ಹಿನ್ನೆಲೆಯಲ್ಲಿ ತೆಂಗು ಬೆಳೆಗಾರರಿಗೆ ಸರ್ಕಾರವು ಯಾವುದಾದರೂ ಪರಿಹಾರವನ್ನು ನೀಡಿದೆಯೇ (ವಿವರ ಒದಗಿಸುವುದು)?

ಶ್ರೀ ಆರ್. ಶ್ರೀನಿವಾಸ (ತೋಟಗಾರಿಕೆ ಸಚಿವರು)

ಅ) 432.68 ಲಕ್ಷ ಮರಗಳು.

ಜಿಲ್ಲಾವಾರು ವಿವರಗಳು ಈ ಕೆಳಗಿನಂತಿವೆ.

ಕ್ರಮ ಸಂಖ್ಯೆ	ಜಿಲ್ಲೆ	ಭಾದಿತ ಮರಗಳ ಸಂಖ್ಯೆ (ಲಕ್ಷ ಸಂಖ್ಯೆಗಳಲ್ಲಿ)
1.	ಬೆಂಗಳೂರು (ನಗರ)	8.60
2.	ಬೆಂಗಳೂರು ಗ್ರಾಮಾಂತರ	42.48
3.	ಚಿತ್ರದುರ್ಗ	28.00
4.	ದಾವಣಗೆರೆ	12.60
5.	ಕೋಲಾರ	18.26
6.	ತುಮಕೂರು	122.20
7.	ಶಿವಮೊಗ್ಗ	5.53
8.	ಮೈಸೂರು	24.02
9.	ಮಂಡ್ಯ	43.67
10.	ಚಾಮರಾಜನಗರ	15.45
11.	ಚಿಕ್ಕಮಗಳೂರು	42.00
12.	ಹಾಸನ	69.86
	ಒಟ್ಟು	**432.68**

ಆ) ಭಾರತ ಸರ್ಕಾರದ ಸ್ಟೀರಿಂಗ್ ಸಮಿತಿ ಮತ್ತು ರಾಜ್ಯಮಟ್ಟದ ತಾಂತ್ರಿಕ ಸಮಿತಿಯ ಶಿಫಾರಸ್ಸಿನಂತೆ ಪರಿಸರ ಪೂರಕವಾದ ಸಮಗ್ರ ನಿರ್ವಹಣಾ ಪದ್ಧತಿಯನ್ನು ಅಳವಡಿಸಲು ವಿವಿಧ ಜಿಲ್ಲೆಗಳಲ್ಲಿ ಬ್ಲಾಕ್ ಪ್ರಾತ್ಯಕ್ಷತೆಗಳು ಮತ್ತು ನುಸಿ ನಿರ್ವಹಣೆ ಬಗ್ಗೆ ರೈತರಲ್ಲಿ ಅರಿವು ಮೂಡಿಸಲು ಜಾಗೃತಿ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈ ಉದ್ದೇಶಕ್ಕಾಗಿ 295.882 ಲಕ್ಷ ರೂ.ಗಳನ್ನು ಬಳಸಲಾಗಿದೆ.

ಇ) ಇಲ್ಲ.

647(1267) ಶ್ರೀ ವಾಟಾಳ್ ನಾಗರಾಜ್ ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಳೆದ ಮೂರು ವರ್ಷಗಳಿಂದ ಬೆಳೆ ಪರಿಹಾರ ಅಂಗವಾಗಿ ರಾಜ್ಯದ ರೈತರಿಗೆ ನೀಡಬೇಕಾಗಿರುವ ಪರಿಹಾರದ ಮೊತ್ತವೆಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಈ ಮೊತ್ತಕ್ಕೆ ಅರ್ಹರಾಗಿರುವ ರೈತರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು);

ಇ) ಈ ಮೊತ್ತವನ್ನು ಪೂರ್ಣವಾಗಿ ಸರ್ಕಾರವು ಪಾವತಿಸಿದೆಯೇ; ಹಾಗಿದ್ದಲ್ಲಿ ಪಾವತಿಸುವುದು ಎಂದಿನಿಂದ;

ಈ) ಸದರಿ ಮೊತ್ತವನ್ನು ಪಾವತಿಸಲು ಸರ್ಕಾರವು ಕ್ರಮ ಕೈಗೊಂಡಿರುವುದೇ; ಹಾಗಿದ್ದಲ್ಲಿ ಪಾವತಿಸುವುದು ಎಂದಿನಿಂದ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಕಳೆದ ಮೂರು ವರ್ಷಗಳಿಂದ ಬೆಳೆ ವಿಮಾ ಯೋಜನೆಯಡಿಯಲ್ಲಿ ರೈತರಿಗೆ ನೀಡಬೇಕಗಿರುವ ಒಟ್ಟು ಬೆಳೆ ವಿಮಾ ನಷ್ಟ ಪರಿಹಾರ ರೂ. 92478.62 ಲಕ್ಷಗಳು. ಜಿಲ್ಲಾವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ಕಳೆದ ಮೂರು ವರ್ಷಗಳಿಂದ ಬೆಳೆ ವಿಮಾ ಯೋಜನೆಯಡಿಯಲ್ಲಿ ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲಿರುವ ಫಲಾನುಭವಿಗಳ ಸಂಖ್ಯೆ. 2127696ಗಳು. ಜಿಲ್ಲಾವಾರು ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಇ) ಈ ಮೊತ್ತದಲ್ಲಿ 2001–02ನೇ ಸಾಲಿನಿಂದ 2003ರ ಮುಂಗಾರು ಹಂಗಾಮಿನವರಿವಿಗೂ 70344 ಲಕ್ಷಗಳನ್ನು ರೈತರಿಗೆ ಪಾವತಿಸಲಾಗಿದೆ. 2003–04ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿಗೆ ಒಟ್ಟು ಬೆಳೆ ವಿಮಾ ನಷ್ಟ ಪರಿಹಾರವಾದ ರೂ. 22134.68 ಲಕ್ಷಗಳನ್ನು ಪಾವತಿಸಬೇಕಾಗಿದೆ.

ಈ) ದಿನಾಂಕ 3–1–2005ರಂದು ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯು 2003–04ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆ ನಷ್ಟ ಪರಿಹಾರ ಇತ್ಯರ್ಥಪಡಿಸಲು ರಾಜ್ಯ ಸರ್ಕಾರದ ಪಾಲಿನ ಹಣವನ್ನು ಬಿಡುಗಡೆ ಮಾಡಲು ಕೋರಿದ್ದು, ಈ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಂಡಿದ್ದು, ಶೀಘ್ರದಲ್ಲಿ ರೈತರಿಗೆ ಪಾವತಿಸಲಾಗುವುದು.

648(1268) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹಳದಿ ಪಡಿತರ ಚೀಟಿ ಹಂಚಿಕೆಯಲ್ಲಿ ತೀವ್ರ ತಾರತಮ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಲಕ್ಷಾಂತರ ಬಡ ಅರ್ಹ ಕುಟುಂಬಗಳಿಗೆ ಹಳದಿ ಪಡಿತರ ಚೀಟಿ ವಿತರಿಸಲು ಸರ್ಕಾರವು ಕೈಗೊಳ್ಳುವ ಕ್ರಮಗಳಾವುವು;

ಇ) ಹಳದಿ ಪಡಿತರ ಚೀಟಿ ಹೊಂದಿದವರಿಗೆ ನ್ಯಾಯ ಬೆಲೆ ಅಂಗಡಿಗಳಲ್ಲಿ ವಿತರಿಸಲಾಗುವ ಆಹಾರ ಸಾಮಗ್ರಿಗಳು ಯಾವುವು;